ಕರ್ನಾಟಕ ವಿಧಾನ ಪರಿಷತ್ತು

ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ	574
ಸದಸ್ಯರ ಹೆಸರು	ಶ್ರೀ ಕೆ.ಎ. ತಿಪ್ಪೆಸ್ವಾಮಿ (ನಾಮನಿರ್ದೇಶನ ಹೊಂದಿದವರು)
ಉತ್ತರಿಸುವವರು	ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಹಾಗೂ ವಿಕಲಚೇತನರ ಮತ್ತು ಹಿರಿಯ ನಾಗರಿಕರ ಸಬಲೀಕರಣ ಸಚಿವರು.
ಉತ್ತರಿಸಬೇಕಾದ ದಿನಾಂಕ	05-02-2021

ಕ್ರಂ.ಸಂ	ಪ್ರಶ್ನೆ	ಉತ್ತರ
ಅ	ಕಳೆದ 03 ವರ್ಷಗಳಲ್ಲಿ ರಾಜ್ಯದಲ್ಲಿ ಸಂಭವಿಸಿರುವ ಬಾಲ್ಯವಿವಾಹಗಳೆಷ್ಟು; (ಜಿಲ್ಲಾವಾರು ಸಂಪೂರ್ಣ ಮಾಹಿತಿ ನೀಡುವುದು)	ಕಳೆದ 03 ವರ್ಷಗಳಲ್ಲಿ ರಾಜ್ಯದಲ್ಲಿ ಸಂಭವಿಸಿರುವ ಬಾಲ್ಯವಿವಾಹಗಳು:- 2017-18 - 102 2018-19 - 119 2019-20 - 156 ಜಿಲ್ಲಾವಾರು ಮಾಹಿತಿಯನ್ನು ಅನುಬಂಧ-1ರಲ್ಲಿ ಒದಗಿಸಿದೆ.
ಆ	ನಿಗದಿಪಡಿಸಿರುವ ಸಮರ್ಥನೀಯ ಗುರಿಗಳನ್ನು (Sustainable Goals) ತಲುಪಲು ರಾಜ್ಯ ಸರ್ಕಾರ ಬಾಲ್ಯವಿವಾಹ ಮತ್ತು ಬಲವಂತದ ವಿವಾಹಗಳನ್ನು ತಡೆಗಟ್ಟಲು ಕೈಗೊಂಡಿರುವ ಕ್ರಮಗಳೇನು; (ಸಂಪೂರ್ಣ ವಿವರ ನೀಡುವುದು)	ಬಾಲ್ಯವಿವಾಹ ಮತ್ತು ಬಲವಂತದ ವಿವಾಹಗಳನ್ನು ತಡೆಗಟ್ಟಲು ನಿಗಧಿಪಡಿಸಿರುವ ಸಮರ್ಥನೀಯ ಗುರಿಗಳನ್ನು ತಲುಪಲು ಕೈಗೊಂಡಿರುವ ಕ್ರಮದ ವಿವರಗಳನ್ನು ಅನುಬಂಧ-2ರಲ್ಲಿ ಒದಗಿಸಿದೆ.
ಇ	ಇತ್ತೀಚಿನ ಕೊರೋನ ಸೋಂಕು ಪಿಡುಗಿನಿಂದ ಬಾಲ್ಯ ವಿವಾಹಗಳಲ್ಲಿ ಗಣನೀಯ ಏರಿಕೆ ಉಂಟಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಬಂದಿದ್ದಲ್ಲಿ, ಈ ಬಾಲ್ಯ ವಿವಾಹಗಳನ್ನು ತಡೆಗಟ್ಟಲು ಸರ್ಕಾರವು ತೆಗೆದುಕೊಂಡಿರುವ ಕ್ರಮಗಳೇನು;	ಬಂದಿದೆ. ಕೊರೋನ ಸೋಂಕು ಅವಧಿಯಲ್ಲಿ ಈ ಬಾಲ್ಯವಿವಾಹಗಳನ್ನು ತಡೆಗಟ್ಟಲು ತೆಗೆದುಕೊಂಡಿರುವ ಕ್ರಮಗಳ ವಿವರಗಳನ್ನು ಅನುಬಂಧ-3ರಲ್ಲಿ ಒದಗಿಸಿದೆ.
ಈ	ಬಹುತೇಕ ಬಾಲ್ಯವಿವಾಹ ಪ್ರಕರಣಗಳಲ್ಲಿ ತಾಯಿ-ತಂದೆಯರ ಆರ್ಥಿಕ ದುರ್ಬಲತೆ ಮತ್ತು ಬಾಲಕಿಯರು ತಂದೆ-ತಾಯಿಗಳಿಗೆ ಭಾರವಾಗಬಾರದೆಂಬ ಭಾವನೆಗಳಿಂದ ಕೂಡಿದೆ ಎನ್ನುವ ಅಂಶಗಳು ಸರ್ಕಾರದ ಅರಿವಿಗೆ ಬಂದಿದೆಯೇ;	ಇಂತಹ ಯಾವುದೇ ಅಂಶಗಳು ಸರ್ಕಾರದ ಗಮನಕ್ಕೆ ಬಂದಿರುವುದಿಲ್ಲ.
ಉ	ರಾಜ್ಯದಲ್ಲಿ ಬಾಲ್ಯವಿವಾಹಗಳು, ಯಾವ ವರ್ಗ/ಸಮುದಾಯಗಳಲ್ಲಿ ಸಾಂಪ್ರದಾಯಿಕವಾಗಿ ಉಳಿದಿದೆ ಎಂಬುವುದು ಗಣತಿ/ಸಮೀಕ್ಷೆಯಿಂದ ಸರ್ಕಾರದ ಗಮನಕ್ಕೆ ಬಂದಿದೆಯೇ? (ವಿವರ ನೀಡುವುದು)	ರಾಜ್ಯದಲ್ಲಿ ಬಾಲ್ಯವಿವಾಹಗಳು, ಯಾವ ವರ್ಗ/ಸಮುದಾಯಗಳಲ್ಲಿ ಸಾಂಪ್ರದಾಯಿಕವಾಗಿ ಉಳಿದಿದೆ ಎಂಬುದರ ಬಗ್ಗೆ ಗಣತಿ / ಸಮೀಕ್ಷೆ ನಡೆಸಿರುವುದಿಲ್ಲ. ಆದಾಗ್ಯೂ ಕೆಲವು ಸಮುದಾಯಗಳಲ್ಲಿ ಇರುವ ಪದ್ಧತಿಯಂತೆ ಬಾಲ್ಯವಿವಾಹಗಳು ನಡೆಯದಂತೆ ಕ್ರಮವಹಿಸಿದ್ದು, ಬಾಲ್ಯವಿವಾಹಗಳ ದುಷ್ಪರಿಣಾಮಗಳ ಬಗ್ಗೆ ಅರಿವು ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗಿದೆ.

(ಶಶಿಕಲಾ ಅಣ್ಣಾಸಾಹೇಬ್ ಜೊಲ್ಲೆ)
ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಹಾಗೂ ವಿಕಲಚೇತನರ,
ಮತ್ತು ಹಿರಿಯ ನಾಗರೀಕರ ಸಬಲೀಕರಣ ಸಚಿವರು.

ಸಂಖ್ಯೆ: ಮಮಇ 15 ಮಮಅ 2021

ಅನುಬಂಧ-1				
ಕಳೆದ 03 ವರ್ಷಗಳಲ್ಲಿ ರಾಜ್ಯದಲ್ಲಿ ಸಂಭವಿಸಿರುವ ಬಾಲ್ಯವಿವಾಹಗಳ ಸಂಖ್ಯೆ ಜಿಲ್ಲಾವಾರು ಮಾಹಿತಿ				
ಕ್ರಂ.ಸಂ	**ಜಿಲ್ಲೆಯ ಹೆಸರು**	**2017-18**	**2018-19**	**2019-20**
1	**2**	**3**	**4**	**5**
1	ಬಾಗಲಕೋಟೆ	0	7	5
2	ಬೆಂಗಳೂರು(ಗ್ರಾ)	1	1	0
3	ಬೆಂಗಳೂರು(ನ)	1	5	3
4	ಬೆಳಗಾವಿ	4	12	12
5	ಬಳ್ಳಾರಿ	1	2	3
6	ಬೀದರ್	0	5	0
7	ವಿಜಯಪುರ	0	1	0
8	ಚಾಮರಾಜನಗರ	1	0	3
9	ಚಿಕ್ಕಬಳ್ಳಾಪುರ	9	7	10
10	ಚಿಕ್ಕಮಗಳೂರು	2	2	5
11	ಚಿತ್ರದುರ್ಗ	4	3	2
12	ದಕ್ಷಿಣ ಕನ್ನಡ	3	2	4
13	ದಾವಣಗೆರೆ	6	2	2
14	ಧಾರವಾಡ	2	0	2
15	ಗದಗ	0	0	1
16	ಕಲಬುರಗಿ	4	7	12
17	ಹಾಸನ	0	2	0
18	ಹಾವೇರಿ	0	1	0
19	ಕೊಡಗು	0	2	1
20	ಕೋಲಾರ	0	0	1
21	ಕೊಪ್ಪಳ	5	6	5
22	ಮಂಡ್ಯ	21	18	29
23	ಮೈಸೂರು	11	4	7
24	ರಾಯಚೂರು	0	1	3
25	ರಾಮನಗರ	13	7	31
26	ಶಿವಮೊಗ್ಗ	8	13	10
27	ತುಮಕೂರು	5	5	4
28	ಉಡುಪಿ	0	1	1
29	ಉತ್ತರ ಕನ್ನಡ	0	2	0
30	ಯಾದಗಿರಿ	1	1	0
ಒಟ್ಟು		**102**	**119**	**156**

ಅನುಬಂಧ-2

ನಿಗದಿಪಡಿಸಿರುವ ಸಮರ್ಥನೀಯ ಗುರಿಗಳನ್ನು (Sustainable Goloals) ತಲುಪಲು ರಾಜ್ಯ ಸರ್ಕಾರ ಬಾಲ್ಯವಿವಾಹ ಮತ್ತು ಬಲವಂತದ ವಿವಾಹಗಳನ್ನು ತಡೆಗಟ್ಟಲು ನಿರ್ವಹಿಸಿರುವ ಕ್ರಮಗಳ ವಿವರ

- ಬಾಲ್ಯವಿವಾಹ ನಿಷೇಧ ಕಾಯ್ದೆ-2006ನ್ನು ಪರಿಣಾಮಕಾರಿಯಾಗಿ ಅನುಷ್ಠಾನಗೊಳಿಸುವ ಸಂಬಂಧ ಸರ್ಕಾರದ ಆದೇಶ ಸಂಖ್ಯೆ: ಮಮಇ 501 ಎಸ್ .ಜಿ .ಡಿ 2011 ದಿನಾಂಕ:16.11.2011ರಲ್ಲಿ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ನಿರ್ದೇಶನಾಲಯದಲ್ಲಿ ಉಸ್ತುವಾರಿ ಕೋಶವನ್ನು ಸ್ಥಾಪಿಸಲಾಗಿದೆ.
- ಬಾಲ್ಯವಿವಾಹ ನಿಷೇಧ ಅಧಿನಿಯಮ-2006ಕ್ಕೆ ತಿದ್ದುಪಡಿ ತರಲಾಗಿದ್ದು, ಬಾಲ್ಯವಿವಾಹ ನಿಷೇಧ ಕರ್ನಾಟಕ ತಿದ್ದುಪಡಿ ಕಾಯ್ದೆ-2016 ದಿನಾಂಕ: 03-03-2018ರಿಂದ ಜಾರಿಗೆ ಬಂದಿರುತ್ತದೆ.
- ದಾವಣಗೆರೆ, ಚಿತ್ರದುರ್ಗ, ಧಾರವಾಡ, ಗದಗ, ತುಮಕೂರು ಕೊಪ್ಪಳ, ರಾಯಚೂರು, ಯಾದಗಿರಿ, ಕಲಬುರಗಿ, ಬಾಗಲಕೋಟೆ ಜಿಲ್ಲೆಗಳ 707 ಕೆ.ಎಸ್.ಆರ್.ಟಿ.ಸಿ. ಬಸ್ಸುಗಳಲ್ಲಿ ಬಾಲ್ಯವಿವಾಹ ನಿಷೇಧ ಕುರಿತು 03 ತಿಂಗಳ ಅವಧಿಗೆ ಜಾಹೀರಾತು ಪ್ರದರ್ಶಿಸಲಾಗಿದೆ.
- ಯುನೈಟೆಡ್ ಸಿಸ್ಟರಸ್ ಫೌಂಡೇಶನ್, ಮುಂಬೈ ಇವರು ದಿನಾಂಕ:18-02-2018 ರಂದು ಬೆಂಗಳೂರಿನ ಕಂಠೀರವ ಸ್ಟೇಡಿಯಂನಲ್ಲಿ ಆಯೋಜಿಸಿದ್ದ ಪಿಂಕಥಾನ್-2018 Indian's Biggest Women's Run ಕಾರ್ಯಕ್ರಮದಲ್ಲಿ ಬಾಲ್ಯವಿವಾಹ ನಿಷೇಧದ ಬಗ್ಗೆ ಮತ್ತು ಇಲಾಖೆಯ ಇತರೆ ಕಾರ್ಯಕ್ರಮಗಳ ಬಗ್ಗೆ ಅರಿವು ಮೂಡಿಸಲಾಗಿದೆ.
- ಬಾಲ್ಯವಿವಾಹ ನಿಷೇಧ ಕುರಿತಂತೆ ಸಾಮಾನ್ಯವಾಗಿ ಕೇಳಲಾಗುತ್ತಿರುವ ಪ್ರಶ್ನೆಗಳ ಪುಸ್ತಕ ತಯಾರಿಸಿ ಮುದ್ರಿಸಿ ಜಿಲ್ಲೆಗಳಿಗೆ ವಿತರಿಸಲಾಗಿದೆ.
- ಸಾಮೂಹಿಕ ವಿವಾಹ ಆಯೋಜಕರು, ಪೂಜಾರಿಗಳು, ಕಲ್ಯಾಣಮಂಟಪ ವ್ಯವಸ್ಥಾಪಕರು, ಧಾರ್ಮಿಕ ಮುಖಂಡರು, ಬಾಲ್ಯವಿವಾಹ ನಿಷೇಧಾಧಿಕಾರಿಗಳು, ನ್ಯಾಯಾಧೀಶರು, ಹಾಸ್ಟೆಲ್ ವಾರ್ಡನ್ ಗಳು ಪ್ರೌಢಶಾಲಾ, ಮುಖ್ಯೋಪಾದ್ಯಾಯರು, ಪದವಿ ಪೂರ್ವ ಕಾಲೇಜುಗಳ ಕಾರ್ಯಕರ್ತೆಯರು, ಚುನಾಯಿತ ಪ್ರತಿನಿಧಿಗಳಿಗೆ ಬಾಲ್ಯವಿವಾಹ ನಿಷೇಧ (ಕರ್ನಾಟಕ ತಿದ್ದುಪಡಿ) ಕಾಯ್ದೆ-2016 ಮತ್ತು ಬಾಲ್ಯವಿವಾಹ ನಿಷೇಧ ನಿಯಮಾವಳಿಗಳು, 2014ರ ಕುರಿತು ಅರಿವು ಮೂಡಿಸುವ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿದೆ.
- ಆಕಾಶವಾಣಿ ಕೇಂದ್ರದಿಂದ ರೇಡಿಯೋ ಜಿಂಗಲ್ಸ್ ಮತ್ತು ದೂರದರ್ಶನ ಕೇಂದ್ರದ ಮುಖಾಂತರ ಸ್ಪಾಟ್ ಗಳನ್ನು ಪ್ರಸಾರ ಮಾಡಲಾಗಿದೆ ಹಾಗೂ ವಿಶೇಷ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗಿದೆ.
- ಆಕಾಶವಾಣಿಯಲ್ಲಿ "ಕನಸು ತೋರಣ ಕಟ್ಟಲಿ" ಎಂಬ ಸರಣಿ ಕಾರ್ಯಕ್ರಮ ಮತ್ತು ಫೋನ್ ಇನ್ ಕಾರ್ಯಕ್ರಮಗಳನ್ನು ಪ್ರಸಾರ ಮಾಡಲಾಗಿದೆ.
- ಬಾಲ್ಯವಿವಾಹ ನಿಷೇಧ ಕುರಿತು ರಾಜ್ಯ, ಜಿಲ್ಲಾ ಮತ್ತು ತಾಲ್ಲೂಕು ಮಟ್ಟದಲ್ಲಿ ಸಮನ್ವಯ ಮತ್ತು ಪರಿಶೀಲನಾ ಸಮಿತಿಗಳನ್ನು ರಚಿಸಲಾಗಿದೆ. ಗ್ರಾಮ ಪಂಚಾಯಿತಿ, ಮಟ್ಟದಲ್ಲಿ ಮಹಿಳೆಯರ ಮತ್ತು ಮಕ್ಕಳ ಹಕ್ಕುಗಳ ರಕ್ಷಣೆಯ ಕಾವಲು ಸಮಿತಿ ರಚನೆ ಮಾಡಲಾಗಿದೆ.
- ಬಾಲ್ಯವಿವಾಹ ನಿಷೇಧ ಕುರಿತು ಇಲಾಖಾಧಿಕಾರಿಗಳಿಗೆ ಹಾಗೂ ಸ್ವಯಂ-ಸೇವಾ ಸಂಸ್ಥೆಗಳ ಪ್ರತಿನಿಧಿಗಳಿಗೆ ವಿಭಾಗೀಯ ಮಟ್ಟದಲ್ಲಿ ಕಾರ್ಯಾಗಾರವನ್ನು ಹಮ್ಮಿಕೊಳ್ಳಲಾಗಿದೆ.
- ಬಾಲ್ಯವಿವಾಹ ನಿಷೇಧ ಮತ್ತು ಮಹಿಳೆಯರ ಮತ್ತು ಮಕ್ಕಳ ಅನೈತಿಕ ಸಾಗಾಣಿಕೆ ತಡೆಗಟ್ಟಲು ರಚಿಸಿರುವ ಗ್ರಾಮ ಪಂಚಾಯತ್ ಮಟ್ಟದ ಮಹಿಳೆಯರು ಮತ್ತು ಮಕ್ಕಳ ರಕ್ಷಣೆಯ ಕಾವಲು ಸಮಿತಿ ಸದಸ್ಯರಿಗೆ ಅರಿವು ಮೂಡಿಸಲು ದಿನಾಂಕ:23-01-2020, 24-01-2020, 31-01-2020 ಮತ್ತು 01-02-2020 ರಂದು ಉಪಗ್ರಹ ಆಧಾರಿತ ಕಾರ್ಯಕ್ರಮ ನಡೆಸಲಾಗಿದೆ.

****

ಅನುಬಂಧ-3

ಬಾಲ್ಯವಿವಾಹಗಳನ್ನು ತಡೆಗಟ್ಟಲು ಸರ್ಕಾರವು ತೆಗೆದುಕೊಂಡಿರುವ ಕ್ರಮಗಳು

- 2020-21ನೇ ಸಾಲಿನಲ್ಲಿ ಕೋವಿಡ್-19 ಸಮಯದ ಲಾಕ್ ಡೌನ್ ಅವಧಿಯಲ್ಲಿ ಬಾಲ್ಯವಿವಾಹ ಪ್ರಕರಣಗಳು ಹೆಚ್ಚಾಗಿ ಕಂಡು ಬಂದಿದ್ದು, ಬಾಲ್ಯವಿವಾಹವನ್ನು ತಡೆಯಲು ಜಿಲ್ಲಾ ಮಟ್ಟದ ಬಾಲ್ಯವಿವಾಹ ನಿಷೇಧಾಧಿಕಾರಿಗಳಿಗೆ ದಿನಾಂಕ: 17-10-2020ರಂದು ವಿಡಿಯೋ ಸಂವಾದ ಕಾರ್ಯಕ್ರಮವನ್ನು ಏರ್ಪಡಿಸಿ ಸೂಕ್ತ ಸಲಹೆಗಳನ್ನು ನೀಡಲಾಗಿದೆ.
- 2020-21ನೇ ಸಾಲಿನಲ್ಲಿ ಕೋವಿಡ್-19 ಸಮಯದ ಈವರೆಗೆ 1918 ಬಾಲ್ಯವಿವಾಹಗಳನ್ನು ತಡೆಗಟ್ಟಲಾಗಿದೆ.
- ಸರ್ಕಾರದ ಮುಖ್ಯ ಕಾರ್ಯದರ್ಶಿಯವರ ಅಧ್ಯಕ್ಷತೆಯಲ್ಲಿ 30 ಜಿಲ್ಲಾ ಮುಖ್ಯ ಕಾರ್ಯನಿರ್ವಹಣಾಧಿಕಾರಿಗಳು ಜಿಲ್ಲಾ ಪಂಚಾಯತ್ ಹಾಗೂ ಉಪನಿರ್ದೇಶಕರು, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಗಳಿಗೆ ಬಾಲ್ಯವಿವಾಹ ನಿಷೇಧ ಕಾಯ್ದೆಯ ಅನುಷ್ಠಾನದ ಬಗ್ಗೆ ವಿಡಿಯೋ ಸಂವಾದ ಕಾರ್ಯಕ್ರಮವನ್ನು ಪ್ರತಿ ತಿಂಗಳು ನಡೆಸಲಾಗುತ್ತಿದೆ.
- ಬಾಲ್ಯವಿವಾಹ ನಿಷೇಧ (ಕರ್ನಾಟಕ ತಿದ್ದುಪಡಿ) ಕಾಯ್ದೆ-2016ರ ಜಾರಿಗೊಳಿಸುವಿಕೆಯ ಕುರಿತು "ಕ್ರಮಬದ್ಧ ಕಾರ್ಯವಿಧಾನ" (ಎಸ್.ಓ.ಪಿ) ಪುಸ್ತಕದ ಮುದ್ರಣಕ್ಕೆ ಕ್ರಮ ವಹಿಸಲಾಗಿದೆ.

****